ಶ್ರೀ ಎಂ. ರಾಜಶೇಖರ ಮೂರ್ತಿ.—ಹದಿನಾಲ್ಕು ವರ್ಷಗಳಿಂದ ಸರ್ಕಾರಕ್ಕೆ ಬರತಕ್ಕ ಅಸಲಾಗಲಿ ಬಡ್ಡಿಯಾಗಲಿ ಇಲ್ಲಿಯವರೆಗೆ ಏನಾದರೂ ಅವರಿಂದ ಪಾವತಿ ಆಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ಪಾವತಿ ಆಗಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಷ್ಟಾಗಿದೆ?

ಶ್ರೀ ಎಚ್. ಸಿದ್ದವೀರಪ್ಪ.—ನಮಾರು ಇಲ್ಲಿಯವರೆಗೂ ಒಂದು ಲಕ್ಷ ಅಥವಾ ಒಂದುವರೆ ಲಕ್ಷದೊಳಗೆ ಪಾವತಿಯಾಗಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಉಳಿಕೆ ಮೊಬಲಗು ಸರ್ಕಾರಕ್ಕೆ ಪಾವತಿ ಆಗುತ್ತಿದೆಯೇ ಎನ್ನುವ ಭರವಸೆ ಸರ್ಕಾರಕ್ಕೆ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಬಹಳ ಕಷ್ಟವಾದ ಪ್ರಶ್ನೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಸರ್ಕಾರ ಯಾವ ಉದ್ದೇಶಕ್ಕೋಸ್ಕರ ಈ ಕಾರ್ಖಾನೆಗೆ ಸಾಲ ಕೊಟ್ಟಿತು?

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಖಾನೆ ಮುಂದುವರಿಯಬೇಕು, ಅದರಿಂದ ನಮ್ಮ ರೈತರಿಗೆ ಅನುಕೂಲವಾಗಬೇಕು, Sericulture Industry ನರಿಯಾಗಿರಬೇಕು ಎಂಬುದು ನಮ್ಮ ಉದ್ದೇಶ.

ಶ್ರೀ ಎಂ. ರಾಜಶೇಖರ ಮೂರ್ತಿ. -ಕೂಲಿಗಾರರಿಗೆ ಅನುಕೂಲವಾಗಬೇಕು ಎಂಬ ಉದ್ದೇಶವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಅದೂ ಸೇರಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಶಾಖೆಗಳ ಮೈಕೆ ಒಂದು ಶಾಖೆ ಕೆಲಸ ಮಾಡುತ್ತಿದೆ. ಇನ್ನು ಉಳಿದ ಆರು ಶಾಖೆಗಳು ಕೆಲಸ ಮಾಡದೆ ಇರುವುದರಿಂದ ಕೂಲಿಗಾರರಿಗೆ ಅನುಕೂಲವಾಗುತ್ತಾ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಕಾರ್ಖಾನೆ ಇನ್ನೂ ಕೆಲಸಮಾಡುತ್ತಿದೆ. ಅಲ್ಲಿಯಾದರೂ ಕೆಲಸ ಮಾಡುತ್ತಿದ್ದಾರಲ್ಲ!

ಶ್ರೀ ಎಂ. ರಾಜಶೇಖರ ಮೂರ್ತಿ.—450 ಬೇಸಿಕ್‌ಗಳ ಮೈಕೆ 3 ಬೇಸಿಕ್‌ಗಳು ಕೆಲಸ ಮಾಡುತ್ತಾ ಇಲ್ಲ. ಕೂಲಿಗಾರರಿಗೆ 3 ತಿಂಗಳುಗಳಿಂದ ಕೂಲಿ ಕೊಟ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಬಹಳ ಕಠಿಣ ಪರಿಸ್ಥಿತಿಯಲ್ಲದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಒಂದು proposal ಸರ್ಕಾರಕ್ಕೆ ಬಂದಿದೆ ಎಂದು ಹೇಳಿದ್ದೀರಿ; ಅದು ಏನು?

ಡಾ॥ ಆರ್. ನಾಗನಗೌಡ.—ನಾವೇ factory ಯನ್ನು ತೆಗೆದುಕೊಂಡು ಅವರನ್ನು ಸಾಲದಿಂದ ಋಣಮುಕ್ತರನ್ನಾಗಿ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕಾರ್ಕಳಹಳ್ಳಿ Silk Filature ನಡೆಸುವಹಾಗೆ ಈ ಕಾರ್ಖಾನೆಯನ್ನು ತೆಗೆದುಕೊಂಡು ನಡೆಸಿದರೆ silk industriesಗೆ ಬಹಳ ಅನುಕೂಲವಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಕೇಳುವುದು ಸರಿಯಾಗಿ ಅರ್ಥವಾಗುವುದಿಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಕಾರ್ಖಾನೆಗೆ ತಾವು ಕೊಟ್ಟಿರುವ ಸಾಲವನ್ನು ತಾವೇ ಕಟ್ಟಿಕೊಂಡು ಕಾರ್ಕಳಹಳ್ಳಿ Silk Filatureನ್ನು ಯಾವ ರೀತಿ ನಿಮ್ಮ ಮಾಲೀಕತ್ವದಲ್ಲಿ ನಡೆಸುತ್ತಿದ್ದೀರೋ ಅದೇರೀತಿ ಇದನ್ನೂ ನಡೆಸಿದರೆ silk industryಗೆ ಬಹಳ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರತಕ್ಕದ್ದು Joint Stock Company. ನಾವು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಅದಕ್ಕೋಸ್ಕರ 'Liquidate ಮಾಡಿ, ಸಾಲದಿಂದ ಋಣಮುಕ್ತರನ್ನಾಗಿಮಾಡಿ' ಎಂದು ಸರ್ಕಾರದವರನ್ನು ಕೇಳುತ್ತಿದ್ದಾರೆ. ಅದೂ ಅಲ್ಲದೆ ಈಗಿರುವ Assets ಮತ್ತು Liabilities ಕಡಿಮೆ ಇವೆ. ಈ ವಿಚಾರದಲ್ಲಿ ನಾವು ಅವರ ಜೊತೆಗೆ ವ್ಯವಹಾರ ನಡೆಸುತ್ತಿದ್ದೇವೆ. ಇದನ್ನು ಈಗಿರುವಹಾಗೆ ಮುಂದಕ್ಕೆ ಬಿಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಈ ಫಿಲೇಚರ್‌ನಲ್ಲಿ ಸರ್ಕಾರಿ ಸಿಬ್ಬಂದಿಗಾಗಿ ಎಷ್ಟು ಖರ್ಚಾಗುತ್ತಿದೆ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರೀ ಸಿಬ್ಬಂದಿಗಾಗಿ ಖರ್ಚು ಆಗುತ್ತಾ ಇಲ್ಲ.

ಶ್ರೀ ಬಿ. ರಾಚಯ್ಯ.—ಟಿ. ನರಸೀಪುರ Silk Filatureನಲ್ಲಿ ಸರ್ಕಾರೀ ಆಫೀಸರನ್ನು ನೇಮಕ ಮಾಡಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಅವರು direct ಆಗಿ work ಮಾಡುತ್ತಿದ್ದಾರೆ. ಈ ಸರ್ಕಾರೀ ಕೆಲಸಕ್ಕೇ ಅಲ್ಲ. ಕಂಪೆನಿಗೋಸ್ಕರ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—Establishment ಗೋಸ್ಕರ ಎಷ್ಟು ಖರ್ಚಾಗುತ್ತಿದೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಕೆಲಸ ಮಾಡುವುದಕ್ಕಿಂತಲೂ establishmentಗೆ ಪ್ರತಿ ವರ್ಷ ಜಾಸ್ತಿ ಖರ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

---

## Chairman, Lac and Paint Works, (Re-appointment).

*Q.*—443. **Sri N. HUCHMASTHI GOWDA** (Huliyurdurga).—

Will the Government be pleased to state :—

the date on which the previous term of office of the Chairman, Lac and Paint Works, came to an end and the date on which he was re-appointed ?

*A.*—**Sri H. SIDDAVEERAPPA** (Minister for Home and Industries).—

On 30th November 1954. He has been continued as Chairman until further orders. This order was communicated to him on 20th December 1954.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಂಥ ಹುದ್ದೆಯ ಅವಧಿ ಆಚ್ಚೆರಾಗುವುದಕ್ಕೆ ಮುಂಚಿತವಾಗಿಯೇ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ವರದಿ ಬರುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿತ್ತು. ಆದರೆ procedureನಲ್ಲಿ ಸ್ವಲ್ಪ ದಿವಸ delay ಆಗಿದೆ ಅಷ್ಟೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಆರ್ಡರನ್ನು communicate ಮಾಡುವುದಕ್ಕೆ ಮುಂಚೆ ಎಷ್ಟು ದಿವಸಗಳ ಹಿಂದೆ ಸರ್ಕಾರ ಹುಕುಂ ಮಾಡಿದೆ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ದಿವಸಗಳಹಿಂದೆ. Communicate ಮಾಡುವುದರಲ್ಲಿ ತಡವಾಗಿದೆಯೆಂದು ಹೇಳಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ 20 ದಿವಸಗಳಲ್ಲಿ ನಡೆದಿರುವ ವ್ಯವಹಾರಗಳಿಗೆ ಯಾರು ಜವಾಬ್ದಾರರು?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ provision ಇದೆ. Company's Act ನ 19ನೆಯ ಸಬ್‌ಕ್ಲಾಸ್ ಪ್ರಕಾರ ಕೆಲಸ ನಡೆದಿದೆ; ತೊಂದರೆಯಾಗಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ delay ಆಗಿರುವುದಕ್ಕೆ ಕಾರಣರು ಮೊಬ್ಬೇನರರೇ, ಥವಾ ಕೆಳಗಿನ ಅಧಿಕಾರಿಗಳೇ ಅಥವಾ ಕೆಳಗಿನ ನೌಕರರೇ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲರೂ ಸೇರಿದ್ದಾರೆ; It is a co-ordinated whole. That delay is not unpardonable.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಪ್ಪು ಯಾರದೆಂದು ಹೇಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನರ್ಕಾರದ್ದೆಂತಲೇ ಹೇಳೋಣ.

ಶ್ರೀ ಎಸ್. ಎಚ್. ತಮ್ಮಯ್ಯ ಉ॥ ಹನುಮಂತೇಗೌಡರ ತಮ್ಮಯ್ಯ.—ಈ ಕಂಪೆನಿಯು ಕೆಲಸ ಬಹಳ ಆಶಾದಾಯಕವಾಗಿದೆಯೆಂದಲ್ಲವೆ, ಈ ಚೇರ್ಮನ್ನರನ್ನು ಹೆಚ್ಚುಕಾಲ ಇಟ್ಟುಕೊಳ್ಳಬೇಕೆಂದು ಮಾಡಿದ್ದು?

(ಉತ್ತರವಿಲ್ಲ)

---

## Government Industries to manufacture finished products (Establishment Districts).

*Q.*—525. Sri K. V. BYRE GOWDA (Bangalore North).—

Will the Government be pleased to state:—

whether they have contemplated to establish such industries as would manufacture finished products from the raw materials available in such places of the districts?

*A.*—Sri H. SIDDAVEERAPPA (Minister for Home and Industries).—

Government do not at present contemplate setting up industries of their own in all the important places of the District. Their policy, however, is decentralisation of industries and to encourage establishment of such industries in the private sector wherever facilities such as raw materials, water supply, electric power, skilled labour, transport, etc., are available.

ಶ್ರೀ ಕೆ. ವಿ. ಬೈರೇಗೌಡ.—ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಿ ಆಯಾ ಡಿಸ್ಟ್ರಿಕ್ಟ್‌ಗಳಲ್ಲೇ ಸಾಧ್ಯವಾದಷ್ಟುಮಟ್ಟಿಗೆ ಏರ್ಪಡಿಸುವುದಾಗಿ ಹೇಳಿದ್ದೀರಿ. ಈಗ ಬೆಂಗಳೂರಿನ ಸುತ್ತಮುತ್ತಲೂ ಮಾಡಿರುವ ರೀತಿಯಲ್ಲಿ ಬೇರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಯಾವುದಾದರೂ ಕೈಗಾರಿಕೆಗಳನ್ನು ಏರ್ಪಡಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮೈಸೂರು, ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು ಮುಂತಾಗಿ ಎಲ್ಲಾ ಕಡೆಯಲ್ಲೂ ಒಂದೊಂದು ಕೈಗಾರಿಕೆ ಏರ್ಪಾಡಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ವ್ಯವಸಾಯದ ಪದಾರ್ಥಗಳಾದ ಆಲೂಗಡ್ಡೆ ಮುಂತಾದುವುಗಳನ್ನು canning ಮಾಡಿಸುವುದಕ್ಕೇನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಸ್ಥಿತಿ ಅನುಕೂಲವಾಗಿದ್ದು, raw materials ಸಾಕಾದಷ್ಟು ಸಿಕ್ಕಿ natural facilities ಇದ್ದರೆ ಬೆಂಗಳೂರಿನಲ್ಲೆ ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಆಲೂಗೆಡ್ಡೆಯು ಹೆಚ್ಚಾಗಿ ಬೆಂಗಳೂರು, ಹಾಸನ, ಕೋಲಾರ—ಈ ಭಾಗಗಳಲ್ಲಿ ಬೆಳೆಯುವುದರಿಂದ, ಅದನ್ನು ಶೇಖರಿಸಿಡುವುದಕ್ಕಾಗಿ ಒಂದು cooling plant ನ್ನು ಏರ್ಪಡಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ suggestion ಬಂದರೆ ಮಾಡುತ್ತೇವೆ.

---

## Silk Industrialists (Deputation).

*Q.*—507. Sri N. HUCHMASTHY GOWDA (Huliyurdurga).—

Will the Government be pleased to state:—

(*a*) when they intend sending some people interested in Silk Industry to places where silk is grown in India to acquire better knowledge in the field, as per recommendations of the Mysore Silk Advisory Board;

(*b*) the places to which they intend to send them;

(*c*) the conditions that would be imposed while sending them to such places?

*A.*—Sri H. SIDDAVEERAPPA (Minister for Home and Industries).—

(*a*) The subject is under consideration of Government.

(*b*) and (*c*) *Vide* answer to (*a*).

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮೈಸೂರು ಸಿಲ್ಕ್ ಅಡ್ವೈಸರಿ ಬೋರ್ಡಿನವರು ತೀರ್ಮಾನಮಾಡಿ ಎಷ್ಟು ದಿವಸ ಆಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವಾರು ತಿಂಗಳುಗಳಾದವು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೇಷ್ಮೆಯ ಉತ್ಪತ್ತಿ ಬರ್ಚನ್ನು ಕಡಮೆ ಮಾಡುವುದು ಅತ್ಯಾವಶ್ಯಕವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು,